# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 784 |
| ಉತ್ತರಿಸಬೇಕಾದ ದಿನಾಂಕ | : | 20.09.2022. |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದ ಹಾಲಿನ ಇಳುವರಿ ಕುಸಿದಿರುವುದು ಮತ್ತು ದಿನವಿಡಿ ರಾಸುಗಳನ್ನು ಕೊಟ್ಟಿಗೆಯಲ್ಲೇ ಸಾಕಬೇಕಾದ ಪರಿಸ್ಥಿತಿ ಎದುರಾಗಿ ರೈತರಿಗೆ ಆರ್ಥಿಕ ಹೊರೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br><br>ಬಂದಿದ್ದಲ್ಲಿ ಹೈನುಗಾರರ ಆರ್ಥಿಕ ಪುನಶ್ಚೇತನಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆ ರೂಪಿಸುವುದೇ (ಮಾಹಿತಿ ನೀಡುವುದು) | ಹೌದು<br><br>ಪರಿಶೀಲಿಸಲಾಗುತ್ತಿದೆ. |
| ಆ | ರಾಜ್ಯದಲ್ಲಿ ಡಿಜಿಟಲ್ ಮೀಟರ್ ಅಳವಡಿಸದಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಹಾಲಿನ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ಸಾಧ್ಯವಾಗದೇ ಗುಣಮಟ್ಟದ ಹಾಲು ನೀಡುವ ರೈತರಿಗೆ ಉತ್ತಮ ಬೆಲೆ ಸಿಗದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಮಸ್ಯೆಯನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥ ಪಡಿಸಲಾಗುವುದು. (ವಿವರ ನೀಡುವುದು) | ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಹಾಲಿನ ಗುಣಮಟ್ಟವನ್ನು ಖಾತರಿ ಪಡಿಸಿಕೊಂಡು ಗುಣಮಟ್ಟದ ಹಾಲು ನೀಡುವ ರೈತರಿಗೆ ಉತ್ತಮ ದರ ದೊರಕುವಂತೆ ಮಾಡಲು ಆಟೋಮ್ಯಾಟಿಕ್ ಮಿಲ್ಕ್ ಕಲೆಕ್ಷನ್ ಯೂನಿಟ್‌ಗಳನ್ನು ಹಾಗೂ ಮಿಲ್ಕ್ ಅನಲೈಸರ್‌ಗಳನ್ನು ಅಳವಡಿಸಲಾಗುತ್ತಿದೆ. ಈಗಾಗಲೇ 10,997 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಈ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಹಂತ ಹಂತವಾಗಿ ಈ ವ್ಯವಸ್ಥೆಯನ್ನು ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಅಳವಡಿಸಲು ಉದ್ದೇಶಿಸಲಾಗಿರುತ್ತದೆ. |

..2

| | | |
|---|---|---|
| ಇ | ರಾಜ್ಯದಲ್ಲಿ ಡಿಜಿಟಲ್ ಮೀಟರ್ ಅಳವಡಿಸಿಕೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಂಖ್ಯೆ ಎಷ್ಟು ಮತ್ತು ಡಿಜಿಟಲ್ ಮೀಟರ ಅಳವಡಿಸದಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) | ಅನುಬಂಧದಲ್ಲಿ ನೀಡಲಾಗಿದೆ. |
| ಈ | ರಾಜ್ಯದ ಬಹುತೇಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಇಂದಿಗೂ ಸಬಲೀಕರಣ ಗೊಳಿಸದೇ ಇರುವುದರಿಂದ ಹಲವಾರು ಸಂಘಗಳಲ್ಲಿ ಅಕ್ರಮಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತಿದ್ದು, ಈ ಸಂಘಗಳ ಲೆಕ್ಕ ಪತ್ರಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು) | ಕರ್ನಾಟಕ ಹಾಲು ಮಹಾಮಂಡಳದಲ್ಲಿ ಒಟ್ಟು 10,997 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಲೆಕ್ಕ ಪತ್ರಗಳನ್ನು ಡಿಜಿಟಲೀಕರಣಗೊಳಿಸಲು ಆಟೋಮ್ಯಾಟಿಕ್ ಮಿಲ್ಕ್ ಕಲೆಕ್ಷನ್ ಯೂನಿಟ್‌ಗಳನ್ನು ಅಳವಡಿಸಿದ್ದು, 2022-23ನೇ ಸಾಲಿಗೆ ಉಳಿದ ಪ್ರಾಥಮಿಕ ಹಾಲು ಉತ್ಪಾದರ ಸಹಕಾರ ಸಂಘಗಳಲ್ಲಿ ಆಟೋಮ್ಯಾಟಿಕ್ ಮಿಲ್ಕ್ ಕಲೆಕ್ಷನ್ ಯೂನಿಟ್‌ಗಳನ್ನು / ಮಿಲ್ಕ್ ಅನಲೈಸರ್‌ಗಳನ್ನು ಅಳವಡಿಸಲು ಒಟ್ಟು 3128 ಸಂಘಗಳಿಗೆ ಗುರಿ ಹೊಂದಲಾಗಿದೆ. |

**ಇ- ಪಸಂಮೀ 206 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

## ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 784 ಕ್ಕೆ ಅನುಬಂಧ

| ಕ್ರ.ಸಂ. | ಒಕ್ಕೂಟದ ಹೆಸರು | ಜಿಲ್ಲೆಯ ಹೆಸರು | ಬಿ.ಎಂ.ಸಿ ಸೇರಿದಂತೆ ಎ.ಎಂ.ಸಿ.ಯು ಅಳವಡಿಸಿರುವ ಸಂಘಗಳು (ಸಂಖ್ಯೆಗಳಲ್ಲಿ) | ಎ.ಎಂ.ಸಿ.ಯು ಅಳವಡಿಸದಿರುವ ಸಂಘಗಳು (ಸಂಖ್ಯೆಗಳಲ್ಲಿ) |
|---|---|---|---|---|
| 1 | ಬೆಂಗಳೂರು | ಬೆಂಗಳೂರು ನಗರ | 451 | 47 |
| | | ಬೆಂಗಳೂರು ಗ್ರಾಮಾಂತರ | 766 | 41 |
| | | ರಾಮನಗರ | 872 | 74 |
| 2 | ಕೋಲಾರ | ಕೋಲಾರ | 657 | 278 |
| 3 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 611 | 364 |
| 4 | ತುಮಕೂರು | ತುಮಕೂರು | 924 | 372 |
| 5 | ಹಾಸನ | ಹಾಸನ | 988 | 319 |
| | | ಕೊಡಗು | 21 | 15 |
| | | ಚಿಕ್ಕಮಗಳೂರು | 160 | 63 |
| 6 | ಮಂಡ್ಯ | ಮಂಡ್ಯ | 1058 | 217 |
| 7 | ಮೈಸೂರು | ಮೈಸೂರು | 906 | 241 |
| 8 | ಚಾಮರಾಜನಗರ | ಚಾಮರಾಜನಗರ | 397 | 66 |
| 9 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | 368 | 27 |
| | | ಉಡುಪಿ | 330 | 8 |
| 10 | ಶಿವಮೊಗ್ಗ | ಶಿವಮೊಗ್ಗ | 346 | 193 |
| | | ದಾವಣಗೆರೆ | 243 | 137 |
| | | ಚಿತ್ರದುರ್ಗ | 196 | 100 |
| 11 | ಧಾರವಾಡ | ಧಾರವಾಡ | 78 | 118 |
| | | ಗದಗ | 75 | 110 |
| | | ಉತ್ತರ ಕನ್ನಡ | 63 | 197 |

..2

| | | | | |
|---|---|---|---|---|
| 12 | ಹಾವೇರಿ | ಹಾವೇರಿ | 141 | 263 |
| 13 | ವಿಜಯಪುರ | ವಿಜಯಪುರ | 90 | 45 |
| | | ಬಾಗಲಕೋಟೆ | 250 | 75 |
| 14 | ಕಲಬುರಗಿ | ಕಲಬುರಗಿ | 32 | 119 |
| | | ಬಿದರ್ | 64 | 146 |
| | | ಯಾದಗಿರಿ | 0 | 12 |
| 15 | ಬೆಳಗಾವಿ | ಬೆಳಗಾವಿ | 372 | 246 |
| 16 | ಬಳ್ಳಾರಿ | ಬಳ್ಳಾರಿ | 31 | 47 |
| | | ರಾಯಚೂರು | 68 | 54 |
| | | ವಿಜಯನಗರ | 255 | 87 |
| | | ಕೊಪ್ಪಳ | 184 | 64 |
| | | ಒಟ್ಟು | **10,997** | **4,145** |